ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು

ಸಿ ಸಿ ನಂ**. 1167/2017**

ಸಾಕ್ಷಿದಾರರ ಹೆಸರು- ದೀಪಕ್ ಚಾ ಸಾ -1

ತಂದೆಯ ಹೆಸರು - ಜವರಯ್ಯ ಪ್ರಾ ಸಾ -1

ವಯಸ್ಸು - 48 ವರ್ಷ

ಉದ್ಯೋಗ - ಅಬಕಾರಿ ಅಧೀಕ್ಷಕರು

ವಾಸ ಸ್ಥಳ - ಬೆಂಗಳೂರು

ದಿನಾಂಕಃ 28.07.2025 ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ **:** ಅಭಿಯೋಜನೆಯ ಪರಃ ಎ ಪಿ ಪಿ ಯವರಿಂದ**:**

ನಾನು ದಿ. 20.08.2003 ರಿಂದ 12.03.2013 ರವರೆಗೆ ರಾಜ್ಯ ಅಬಕಾರಿ ಇಂಟಲಿಜೆನ್ಸ್ ಬ್ಯೂರೋ ದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.12.06.2008 ರಂದು ಚಾಸಾ-2 ಮತ್ತು 3 ರವರು ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರಿಗೆ M/s Fragra International, Puducherry ಎಂಬ ಕಂಪನಿಯ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕೆಎಂ ದೊಡ್ಡಿ ಚಾಮುಂಡೇಶ್ವರಿ ಶುಗರ್ಸ್ ಡಿಸ್ಟಿಲರಿಯಿಂದ ಮೇ 2008 ರ ಮಾಹೆಯಲ್ಲಿ ಅಕ್ರಮವಾಗಿ ಪುದಚೇರಿ ರಾಜ್ಯದ ಉಪ ಆಯುಕ್ತರ ಕಛೇರಿಯ ಮೊಹರು ಮತ್ತು ಸಿಲ್ ಗಳನ್ನು ಹಾಗೂ ಅಧಿಕಾರಿಗಳ ಸಹಿಗಳನ್ನು ನಕಲು ಮಾಡಿ ಖೋಟಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಅಕ್ರಮವಾಗಿ 8 ಸಾವಿರ ಲೀಟರ್ ಶೋಧಿಕೃತ ಮದ್ಯ ಸಾರವನ್ನು ಸಾಗಾಟ ಮಾಡಿದ್ದು, ಸದರಿ ಖೋಟಾ ದಾಖಲೆಗಳ ಆಧಾರದ ಮೇಲೆ ಇನ್ನು 8 ಸಾವಿರ ಲೀಟರ್ ಶೋಧಿಕೃತ ಮದ್ಯವನ್ನು ಸಾಗಾಟ ಮಾಡಲು ದಾಖಲೆ ನೀಡಿರುತ್ತಾರೆಂದು ದೂರು ನೀಡಿದ ಮೇರೆಗೆ ಅಬಕಾರಿ ಆಯುಕ್ತರು ದಿ.16.06.2008 ರಂದು ಅಬಕಾರಿ

ಜಂಟಿ ಆಯುಕ್ತರು, ರಾಜು ವಿಚಕ್ಷಣಾ ದಳ ಇವರಿಗೆ ಮೊಕದ್ದಮೆ ದಾಖಲು ಮಾಡಿಕೊಳ್ಳಲು ಹಾಗೂ ಪೊಲೀಸ್ ಇಲಾಖೆಗೆ ಐಪಿಸಿ ಕಾಯ್ದೆಯ ಉಲಂಘನೆಗೆ ಸಂಬಂಧ ಪಟ್ಟಂತೆ ದೂರನ್ನು ನೀಡಲು ಲಿಖಿತವಾಗಿ ಸೂಚನೆ ನೀಡಿದ್ದು, ಅಬಕಾರಿ ಜಂಟಿ ಆಯುಕ್ತರು ನಿರ್ದೇಶನದ ಮೇರೆಗೆ ನಾನು ದಿ.20.06.2008 ರಂದು ಅಬಕಾರಿ ಕಾಯ್ದೆಯಡಿ ಈ ಪ್ರಕರಣ ದಾಖಲು ಮಾಡಿರುತ್ತೇನೆ. ಪ್ರ ವ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ಸಂಪಗಿ ರಾಮನಗರ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಲಿಖಿತ ದೂರನ್ನುದಿ.20.06.2008 ರಂದು ನೀಡಿರುತ್ತೇನೆ.

ದಿ.25.07.2008, ದಿ.19.08.2008 ರಂದು ಅಬಕಾರಿ ಆಯುಕ್ತರ ಕಛೇರಿಗೆ ತೆರಳಿ ಚಾಮುಂಡೇಶ್ವರಿ ಶುಗರ್ಸ್ ಲಿಮಿಟೆಡ್ ನಿಂದ M/s Fragra International, Puducherry ಗೆ ಮದ್ಯಸಾರ ರಫ್ತು ಮಾಡುವ ಸಂಬಂಧ ದಾಖಲೆಗಳನ್ನು ಪರಿಶೀಲಿಸಿರುತ್ತೆನೆ.

ದಿ.23.08.2008 ರಂದು ಅಬಕಾರಿ ಜಂಟಿ ಆಯುಕ್ತರು, ವಿಚಕ್ಷಣಾ ದಳ ಇವರ ಅದೇ ದಿನಾಂಕದ ಅಧಿಕೃತ ಜ್ಞಾಪನವನ್ನು ಪುದಚೇರಿ ರಾಜ್ಯಕ್ಕೆ ಕಳುಹಿಸಲು ಪಡೆದಿರುತ್ತೇನೆ.

ದಿ.25.08.2008 ರಂದು ಅಬಕಾರಿ ಉಪ ಅಧೀಕ್ಷಕರ ನೇತೃತ್ವದಲ್ಲಿ ಸಿಬ್ಬಂದಿಗಳೊಂದಿಗೆ ಪುದಚೇರಿಗೆ ಹೋಗಿ, ದಿ.26.08.2008 ರಂದು ಉಪ ಆಯುಕ್ತರು, ಪುದಚೇರಿ ಕಛೇರಿಗೆ ಭೇಟಿ ನೀಡಿ, ಚಾಸಾ-2 ಮತ್ತು 3, 4 ಹಾಗೂ ಸೆಂಥಿಲ್ ಕುಮಾರರವರನ್ನು ಭೇಟಿ ಮಾಡಿ, ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾಹಿತಿ ಪಡೆದು, ಸಂಬಂಧ ಪಟ್ಟ ಎನ್ ಒ ಸಿ ಗಳನ್ನು ಪರಿಶೀಲನೆ ಮಾಡಿರುತ್ತೇನೆ. ಕೇವಲ 3 ಅಮದು ರಹದಾರಿಗಳನ್ನು ಆರೋಪಿತರಿಗೆ ಅವರು ನೀಡಿದ್ದು, ಸದರಿ ರಹದ್ದಾರಿಯ ಪ್ರಕಾರ 18 ಸಾವಿರ ಲೀಟರ್ ಶೋಧಿಕೃತ ಮದ್ಯಸಾರವನ್ನು ಚಾಮುಂಡೇಶ್ವರಿ ಶುಗರ್ಸ್ ನಿಂದ M/s Fragra International ಗೆ ಆಮದು ಅಗಿರುವುದಾಗಿ ತಿಳಿದು ಬಂದಿರುತ್ತದೆ. ಇನ್ನು ಉಳಿದ 4 ರಹದ್ದಾರಿಗಳ ಬಗ್ಗೆ ಅಲ್ಲಿ ಯಾವುದೇ ದಾಖಲೆಗಳು ಇರಲಿಲ್ಲ. ಈ ಬಗ್ಗೆ ಮಾಹಿತಿ ಒದಗಿಸಲು ಪುದಚೇರಿ ಉಪ ಆಯುಕ್ತರಿಗೆ ನಿವೇದನೆ ನೀಡಿರುತ್ತೇನೆ. ಮದ್ಯಸಾರ ಸಾಗಾಟ ಮಾಡಲು ಉಪಯೋಗಿಸಿದ ಟಿವೈ-01-ಎಬಿ-1156 ವಾಹನದ ಮಾಲೀಕತ್ವದ ಬಗ್ಗೆ ದಾಖಲೆ ಕೋರಿದ್ದು, ಬಿ ಎಕ್ಸ್‌ಟ್ರಾಕ್ಟ್ ನ್ನು ಪಡೆದುಕೊಂಡಿರುತ್ತೇನೆ. ಅದರಂತೆ 1 ನೇ ಆರೋಪಿ ವಾಹನದ ಮಾಲೀಕರಾಗಿರುತ್ತಾರೆ.

ಅದೇ ದಿನ ರಾತ್ರಿ ಸುಮಾರು 10.00 ಗಂಟೆಗೆ 1 ಮತ್ತು 2 ನೇ ಆರೋಪಿತರನ್ನು ಅವರ ಮನೆಯಿಂದ ದಸ್ತುಗಿರಿ ಮಾಡಿದ್ದು, ಅದರ ಬಗ್ಗೆ ಸಂಬಂಧ ಪಟ್ಟ ಇಲಾಖೆಗಳಿಗೆ ಮಾಹಿತಿ ನೀಡಿ ಬೆಂಗಳೂರರಿಗೆ ಕರೆದುಕೊಂಡು ಬಂದಿರುತ್ತೇವೆ.

ದಿ.27.08.2008 ರಂದು 1 ಮತ್ತು 2 ನೇ ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆ ನೀಡಿರುತ್ತಾರೆ. ಆರೋಪಿತರನ್ನು ಸೂಕ್ತ ಬೆಂಗಾವಲಿನಲ್ಲಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುತ್ತೇನೆ.

ದಿ.22.09.2008 ರಂದು ಪುದಚೇರಿ ರಾಜ್ಯಕ್ಕೆ ತೆರಳಲು ಅಬಕಾರಿ ಜಂಟಿ ಆಯುಕ್ತರ ಅನುಮತಿ ಪಡೆದಿರುತ್ತೇನೆ. ಅದೇ ದಿನ ಪುದಚೇರಿಗೆ ಹೋಗಿರುತ್ತೇನೆ.

ದಿ.23.09.2008 ರಂದು ಪುದಚೇರಿ ಉಪ ಆಯುಕ್ತರ ಕಛೇರಿಗೆ ತೆರಳಿ ಅವರಿಗೆ ಮಾಹಿತಿ ಕೋರಿ ಈ ಹಿಂದೆಯೇ ನೀಡಿದ್ದ ನಿವೇದನೆಯ ಆಧಾರದ ಮೇರೆಗೆ ಅವರಿಂದ ದಿ.25.09.2008 ರಂದು ಪತ್ರ ಮತ್ತು ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿಯವರು 2007-08 ನೇ ಸಾಲಿನಲ್ಲಿ 7 ರಹದ್ದಾರಿಗಳ ಪೈಕಿ 3 ರಹದ್ದಾರಿಗಳನ್ನು ತಲಾ 6 ಸಾವಿರ ಲೀಟರ್ ಗಳಂತೆ ಸಾಗಾಣಿಕೆ ಮಾಡಲು ಅಮದು ರಹದಾರಿಯನ್ನು M/s Fragra International ಗೆ ನೀಡಿರುವುದಾಗಿ, ಉಳಿದ 4 ರಹದಾರಿಗಳನ್ನು ತಮ್ಮ ಕಛೇರಿಯಿಂದ ನೀಡಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ಸದರಿ 4 ರಹದಾರಿಗಳಲ್ಲಿ ತಮ್ಮ ಕಛೇರಿಯ ಮೊಹರು ಮತ್ತು ಅಧಿಕಾರಿಗಳ ಸಹಿಯನ್ನು ನಕಲು ಮಾಡಿ ದಾಖಲೆ ಸೃಷ್ಟಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಚಾಸಾ-4 ರವರು Excise verification certificate ನಲ್ಲಿಯೂ ಸಹ ಕಛೇರಿಯ ಮೊಹರು ಮತ್ತು ಅಧಿಕಾರಿಗಳ ಸಹಿಯನ್ನು ನಕಲು ಮಾಡಿ ದಾಖಲೆ ಸೃಷ್ಟಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ ಹಾಗೂ 4 ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ. 2006-07 ಮತ್ತು 2007-08 ರಲ್ಲಿ ನೀಡಿರುವ ನರಹದಾರಿಗಳು ಮತ್ತು ನೀರಪೇಕ್ಷಣಾ ಪತ್ರಗಳ ದೃಢಿಕೃತ ಪ್ರತಿಗಳನ್ನು ನೀಡಿರುತ್ತಾರೆ. ಘಟಕಕ್ಕೆ ಅಮದು ರಹದಾರಿ ಪತ್ರಗಳನ್ನು ನೀಡಿ ದಾಖಲಿಸುವ ವಹಿಯ ದೃಢಿಕೃತ ಪ್ರತಿಗಳನ್ನು ಸಹ ನೀಡಿರುತ್ತಾರೆ. ದಿ.31.03.2006 ರವರೆಗೂ ಸನ್ನದು ನವೀಕರಿಸಿದ ಬಗ್ಗೆ ದೃಢಿಕೃತ ಪ್ರತಿ ನೀಡಿರುತ್ತಾರೆ. ಕಛೇರಿ

ಯಲ್ಲಿ ಉಪಯೋಗಿಸುತ್ತಿದ್ದ ರಬ್ಬರ್ ಮೊಹರು ಮತ್ತು ಅಧಿಕಾರಿಗಳ ಸಹಿಗಳ ಮಾದರಿಯನ್ನು ದೃಢಿಕರಿಸಿ ನೀಡಿರುತ್ತಾರೆ. ನೀರಪೇಕ್ಷಣಾ ಪತ್ರದ ದೃಢಿಕೃತ ನಕಲನ್ನು ಕಳುಹಿಸಿದ ಬಗ್ಗೆ ಪುದಚೇರಿಯ ಉಪ ಆಯುಕ್ತರ ಕಛೇರಿಯಿಂದ ಕಳುಹಿಸಲಾದ ದೂರವಾಣಿ ಮಾಹಿತಿ ಬಗ್ಗೆ 2007 ರಿಂದ ಮೇ 2008 ರವರೆಗಿನ ಮಾಹೆಗಳ ಕಾಲ್ ಡಿಟೆಲ್ಸ್ ನ್ನು ನೀಡಿರುತ್ತಾರೆ.

ದಿ.24.09.2008 ರಂದು No.60, Gopalan Kadai, Perambai Raod, Villanur Commune, Pudacherry ವಿಳಾಸದಲ್ಲಿರುವ M/s Fragra International ಗೆ ಭೇಟಿ ನೀಡಿದ್ದು, ಸದರಿ ಕಟ್ಟಡದ ಬಾಗಿಲಿಗೆ ಬೀಗ ಹಾಕಿರುತ್ತಾರೆ. ವಿಚಾರಿಸಿದಾಗ ಅದರ ಬೀಗ ಮತ್ತು ದಾಖಲೆಗಳು 1 ನೇ ಆರೋಪಿಯ ಬಳಿ ಇರುವುದಾಗಿ ತಿಳಿಸಿರುತ್ತಾರೆ. 1 ನೇ ಆರೋಪಿ ಸಂಪರ್ಕಕ್ಕೆ ಸಿಕ್ಕಿರುವುದಿಲ್ಲ, ಅಕ್ಕ ಪಕ್ಕದವರನ್ನು ವಿಚಾರಿಸಿದಾಗ 1 ವರ್ಷದಿಂದ ಯಾವುದೇ ಕಾರ್ಯಚರಣೆ ನಡೆಸುತ್ತಿಲ್ಲವೆಂದು ತಿಳಿಸಿರುತ್ತಾರೆ.

ದಿ.26.09.2008 ರಂದು ಬೆಂಗಳೂರಿಗೆ ಹಿಂದಿರುಗಿರುತ್ತೇನೆ.

ದಿ.17.10.2008 ರಂದು ಮಂಡ್ಯದ ಉಪ ಆಯುಕ್ತರ ಕಛೇರಿಗೆ ಹೋಗಿ ಚಾಮುಂಡೇಶ್ವರಿ ಶುಗರ್ಸ್ ಡಿಸ್ಟಿಲರಿಯಿಂದ M/s Fragra International ಗೆ ಸಾಗಾಟ ಮಾಡಲು ರಫ್ತು ರಹದಾರಿಗಳ ದೃಢಿಕೃತ ದಾಖಲೆಗಳನ್ನು ನೀಡಲು ನಿವೇದನೆ ನೀಡಿರುತ್ತೇನೆ. ಅದೇ ದಿನ ಚಾಮುಂಡೇಶ್ವರಿ ಶುಗರ್ಸ್ ಗೆ ಭೇಟಿ ನೀಡಿರುತ್ತೇನೆ. ಅಬಕಾರಿ ಅಧೀಕ್ಷಕರಿಗೆ ದಾಖಲೆಗಳನ್ನು ಕೋರಿ ನಿವೇದನೆ ನೀಡಿರುತ್ತೇನೆ.

ದಿ.21.10.2008 ರಂದು ಮಂಡ್ಯ ಜಿಲ್ಲೆ ಅಬಕಾರಿ ಉಪ ಆಯುಕ್ತರಿಂದ ವರದಿ ಪಡೆದುಕೊಂಡಿರುತ್ತೇನೆ.

ದಿ.22.10.2008 ರಂದು ಅಬಕಾರಿ ಅಧೀಕ್ಷಕರು, ಚಾಮುಂಡೇಶ್ವರಿ ಶುಗರ್ಸ್ ರವರು ಮಾಹಿತಿ ನೀಡಿರುತ್ತಾರೆ.

ದಿ.06.11.2008 ರಂದು ಕೆಎಸ್ ಬಿ ಸಿ ಎಲ್ ನ ಪ್ರಧಾನ ವ್ಯವಸ್ಥಾಪಕರಿಗೆ 2006-07, 2007-08 ಸಾಲಿನಲ್ಲಿ ಚಾಮುಂಡೇಶ್ವರಿ ಶುಗರ್ಸ್ ಡಿಸ್ಟಿಲರಿಯಿಂದ M/s Fragra

International ಗೆ ಶೋಧಿಕೃತ ಮದ್ಯ ಸಾರ ಸಾಗಾಟ ಮಾಡುವಾಗ ಬೆಂಗಾವಲಿಗೆ ನೇಮಿಸಿದ್ದ ಸಿಬ್ಬಂದಿಗಳ ಮಾಹಿತಿ ಕೋರಿ ನಿವೇದನೆ ನೀಡಿರುತ್ತೇನೆ.

ದಿ.17.11.2008 ರಂದು 1ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ.

ದಿ.01.12.2008 ರಂದು ಚಾಮುಂಡೇಶ್ವರಿ ಶುಗರ್ಸ್ ಡಿಸ್ಟಿಲರಿ ಗೆ ಭೇಟಿ ನೀಡಿ, ಚಾಸಾ-7 ರಿಂದ 9 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

ದಿ.10.12.2008 ರಂದು ಚಾಮುಂಡೇಶ್ವರಿ ಶುಗರ್ಸ್ ಡಿಸ್ಟಿಲರಿಗೆ ಭೇಟಿ ನೀಡಿ, ಚಾಸಾ-10, 11 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಕೆಎಸ್ ಬಿ ಸಿ ಎಲ್ ನಿಂದ ವರದಿ ಪಡೆದುಕೊಂಡಿರುತ್ತೇನೆ.

ದಿ.19.02.2009 ರಂದು ಚಾಸಾ-13, 14 ರವರಿಗೆ ಕಛೇರಿಗೆ ಹಾಜರಾಗಲು ನೋಟಿಸ್ ನೀಡಿರುತ್ತೇನೆ.

ದಿ.26.02.2009 ರಂದು ಚಾಸಾ-12 ರಿಂದ 14 ರವರಿಗೆ ಕಛೇರಿಗೆ ಹಾಜರಾಗಲು ನೋಟಿಸ್ ನೀಡಿರುತ್ತೇನೆ.

ದಿ.05.03.2009 ರಂದು ಚಾಸಾ-12 ರಿಂದ 14 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ.

ದಿ.26.06.2009 ರಂದು ಅಬಕಾರಿ ಜಂಟಿ ಆಯುಕ್ತರ ಅನುಮತಿ ಪಡೆದು ಪುದಚೇರಿಗೆ ಹೋಗಿರುತ್ತೇನೆ.

ದಿ.27.06.2009 ರಂದು Sri. Ram Transport Finance Company ಗೆ ಭೇಟಿ ನೀಡಿ ವಾಹನ ಸಂಖ್ಯೆ ಟಿವೈ-01-ಎಬಿ-1156 ಗೆ ಸಂಬಂಧಪಟ್ಟಂತೆ ಸಾಲ ನೀಡಿದ ಬಗ್ಗೆ ಹಾಗೂ ವಾಹನದ ಸ್ಥಿತಿಯ ಬಗ್ಗೆ ಮಾಹಿತಿ ಕೋರಿ ನಿವೇದನೆ ನೀಡಿರುತ್ತೇನೆ.

ದಿ.29.06.2009 ರಂದು Sri. Ram Transport Finance Company ರವರು ದಿ.12.07.2007 ರಂದು ಲಾರಿಯನ್ನು ಖರೀದಿಸಲು ಸಾಲ ಪಡೆದಿದ್ದು,

86,624/- ರೂ. ಗಳು ಬಾಕಿ ಇದ್ದ ಕಾರಣ ವಾಹನವನ್ನು ಕಂಪನಿಯ ವಶಕ್ಕೆ ತೆಗೆದುಕೊಂಡು, ದಿ.30.09.2008 ರಂದು ವೆಂಕಟೇಶ ಬಿನ್ ಷಣ್ಮುಗಂ ರವರಿಗೆ 1,05,000/- ರೂ.ಗಳಿಗೆ ಮಾರಾಟ ಮಾಡಿರುವುದಾಗಿ ಮಾಹಿತಿ ನೀಡಿರುತ್ತಾರೆ. ಸದರಿ ವೆಂಕಟೇಶ ರವರನ್ನು ವಿಚಾರಿಸಿದಾಗ ಅವರು ಸದರಿ ಲಾರಿಯನ್ನು ಚಾಸಾ--16 ರವರಿಗೆ 1,17,000/- ರೂ.ಗಳಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ ಮೇರೆಗೆ ಮಾಲೀಕತ್ವದ ದಾಖಲೆಯನ್ನು ಆರ್ ಟಿ ಒ ರವರಿಂದ ಪಡೆದಿರುತ್ತೇನೆ ಮತ್ತು ಸದರಿಯವರ ಹೇಳಿಕೆಗಳನ್ನುದಾಖಲಿಸಿಕೊಂಡಿರುತ್ತೇನೆ.ೆ

ದಿ.30.06.2009 ರಂದು ಅನುಮತಿ ಪಡೆದು ಚೈನೈಗೆ ತೆರಳಿ ಚಾಸಾ-16 ರವರನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತೇನೆ. ಸದರಿಯವರು ವಾಹನ ಹಳೆಯದ್ದಾಗಿದ್ದು, ರಿಪೇರಿ ಮಾಡಲು ಹೆಚ್ಚಿನ ಹಣ ಖರ್ಚಾಗುತ್ತಿದ್ದ ಕಾರಣ ಬಿಡಿ ಬಿಡಿಚ್ಚಿ ವಾಹನ ಮಾರಾಟ ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

ಕೆ ಎಂ ದೊಡ್ಡಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ಶುಗರ್ ಡಿಸ್ಟಲರಿಯಿಂದ ಡಿಸೆಂಬರ್ 2007 ರಿಂದ ಮೇ-2008 ರವರೆಗೆ 4 ಭಾರಿ ಕೋಟಾ ದಾಖಲಾತಿಗಳನ್ನು ಸೃಷ್ಟಿಸಿ ಅವುಗಳ ಆಧಾರದ ಮೇಲೆ ಅಬಕಾರಿ ಅಧಿಕಾರಿಗಳನ್ನು ಹಾಗೂ ಸರ್ಕಾರವನ್ನು ವಂಚಿಸಿ ರಫ್ತು ರಹದಾರಿಗಳನ್ನು ಪಡೆದು ಅಕ್ರಮವಾಗಿ ಒಟ್ಟು 36 ಸಾವಿರ ಲೀಟರ್ ಶೋಧಿಕೃತ ಮದ್ಯಸಾರವನ್ನು ವಾಹನ ಸಂಖ್ಯೆ ಪಿ ವೈ -01- ಎಬಿ-1156 ರಲ್ಲಿ ಸಾಗಾಣಿಕೆ ಮಾಡಿ ಶೋಧಿಕೃತ ಮದ್ಯಸಾರವನ್ನು ದುರಪಯೋಗಪಡಿಸಿಕೊಂಡಿರುತ್ತಾರೆ. ಸದರಿ ಮೇಲೆ ಹೇಳಿದ ವಾಹನಕ್ಕೆ ಸಂಬಂಜಧಿಸಿದಂತೆ ಆರ್ ಟಿ ಓ ಯಿಂದ ಮಾಹಿತಿ ಪಡೆಯಲಾಗಿ ಸದರಿ ವಾಹನದ ಮಾಲೀಕರು ಆರೋಪಿ-1 ರವರಾಗಿರುತ್ತಾರೆ. ಆರೋಪಿ-1 ಮತ್ತು 2 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾಮುಂಡೇಶ್ವರಿ ಶುಗರ್ ಡಿಸ್ಟಲರಿಯಲ್ಲಿ ಕೆಲಸ ಮಾಡುವ ಚಾಸಾ-7 ರಿಂದ 10 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ಸದರಿ 4 ಭಾರಿ ಉಪಯೋಗಿಸಿದ್ದ ಮೇಲೆ ಹೇಳಿದ ವಾಹನದ Escort ಗೆ ನಿಯೋಜನೆಗೊಂಡಿದ್ದ ಚಾಸಾ-11 ರಿಂದ 14 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ವಾಹನಕ್ಕೆ ಸಂಬಂಧಿಸಿದಂತೆ ಚಾಸಾ-15 ಮತ್ತು 16 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಈ ಬಗ್ಗೆ ಆರೋಪಿ-1 ರಿಂದ 3 ರವರುಗಳ ಮೇಲೆ ದಿಃ13-08-2009 ರಲ್ಲಿ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ದಿಃ 16-06-2008 ರಂದು ಅಬಕಾರಿ ಆಯುಕ್ತರವರು ಜಂಟಿ ಆಯುಕ್ತರಿಗೆ ದೂರು ದಾಖಲಿಸಲು ನೀಡಿದ ಆದೇಶವನ್ನು ನಿಪಿ-3 ಎಂದು, ನಿಪಿ-4 ಎಫ್ ಐ ಆರ್, ನಿಪಿ-5 ಸಂಪಿಗೆ ರಾಮನಗರ ಠಾಣೆಗೆ ನೀಡಿದ ದೂರು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು, ನಿಪಿ-6 ಸದರಿಯವರು ದಾಖಲಿಸಿರುವ ಎಫ್ ಐ ಆರ್. ಆರ್ ಟಿ ಓ ಗೆ ವಾಹನದ ಬಿ ಎಕ್ಸ್-ಟ್ರಾಕ್ಟ್

ನ್ನು ಕೇಳಿದ ನಿವೇದನೆ ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು, ಸದರಿಯವರು ಬಿ ಎಕ್ಸ್-ಟ್ರ್ಯಾಕ್ಟ್ ನ ವರದಿಯನ್ನು ನಿಪಿ-8 ಎಂದು, ಆರೋಪಿ-1 ಮತ್ತು 2 ರವರನ್ನು ಬಂಧಿಸಿದ ಬಗ್ಗೆ ವರದಿ ನೀಡಿದ್ದನ್ನು ನಿಪಿ-9 ಮತ್ತು 10 ಎಂದು, ಮೆಮೋ ಆಫ್ ಅರೆಸ್ಟ್ ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ನ್ನು ಪುಡಚೇರಿಯ ಉಪ ವಿಭಾಗಧಿಕಾರಿಗೆ ದಾಖಲಾತಿ ಸಲ್ಲಿಸಿದ ನಿವೇದನೆಯನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು, ಆರೋಪಿ-1 ಮತ್ತು 2 ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಿವೇದನೆಯನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು, ಪುಡಚೇರಿಯ ಅಬಕಾರಿ ಉಪ ವಿಭಾಗಧಿಕಾರಿಯು ಯಾವಾ ಲೈಸನ್ಸ್ ಸೃಷ್ಟಿಸಿದರು ಎಂಬ ವರದಿ ನಿಪಿ-14 ಎಂದು, ನಿಪಿ-15 ರಿಂದ 17 ಎನ್ ಓ ಸಿ ಮತ್ತು ಆಮದು ರಹದಾರಿ ಪತ್ರ, ಮೂರು ಫರ್ಮಿಟ್ ಗಳು ರಿಜಿಸ್ಟರ್ ನಲ್ಲಿ ನಮೂದಾಗಿರುವ ಎಕ್ಸ್ ಟ್ರ್ಯಾಕ್ಟ್ ನ್ನು ಪುಟ ಸಂಖ್ಯೆಃ 53 ನ್ನು ನಿಪಿ-18 ಎಂದು, ಸದರಿ ದಾಖಲೆಯಲ್ಲಿ ಪುಟ ಸಂಖ್ಯೆಃ 55 ಮತ್ತು 56 ರಲ್ಲಿರುವ ಮಾದರಿ ಸಹಿ ಮತ್ತು ಸೀಲ್ ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-18(ಎ) ರಿಂದ (ಸಿ) ಎಂದು, ಪುದುಚೇರಿಯ ಡಿ ಸಿ ಯ ಮಾದರಿ ಸಹಿಯನ್ನು ನಿಪಿ-19 ಎಂದು, ನಿಪಿ-20 ನ್ನು ಅಬಕಾರಿ ಸತ್ಯಾಪನಾ ಅಧಿಕಾರಿಯ ಮಾದರಿ ಸಹಿ, ನಿಪಿ-21 ನ್ನು ಪುದುಚೇರಿಯ ಡಿ ಸಿ ಕಚೇರಿಯ ಮಾದರಿ ಸೀಲ್ ಗಳನ್ನು ಸೀಲ್ ಎಂದು ಗುರುತಿಸಲಾಯಿತು. ಎಲ್-1, ಎಲ್ -4 ಆರ್ ಎಸ್ -2 ರಡಿಯಲ್ಲಿ ಲೈಸನ್ಸ್ ವಿತರಿಸಿದ ದಾಖಲೆಗಳು ಪುಟಸಂಖ್ಯೆಃ57 ರಿಂದ 74 ಅದನ್ನು ನಿಪಿ-22 ಎಂದು, ಪುದುಚೇರಿಯ ಡಿ ಸಿ ರವರ ದೂರವಾಣಿ ಸಂಖ್ಯೆಗೆ ಮಾಡಿದ ಕರೆಯ ವಿವರದ ದಾಖಲೆಯು ಪುಟಸಂಖ್ಯೆಃ 75 ರಿಂದ 88 ಆಗಿದ್ದು ಅದನ್ನು ಒಟ್ಟಾರೆಯಾಗಿ ನಿಪಿ-23 ಎಂದು, ಶ್ರೀ ರಾಮ್ ಟ್ರಾನ್ಸ್ ಪೋರ್ಟ್, ಫೈನ್ಯಾನ್ಸ್ ಕಂಪೆನಿಗೆ ವಿವಾದಿತ ವಾಹನದ ಮಾಹಿತಿ ನೀಡಲು ಬರೆದ ಪತ್ರ ನಿಪಿ-24 ಎಂದು, ನಿಪಿ-25 ಸದರಿಯವರು ನೀಡಿದ ವರದಿ, ನಿಪಿ-26 ಮೂಲ ಮತ್ತು ನಕಲು ಲೈಸನ್ಸ್ ಗಳ ರಹದಾರಿ ತಕ್ತೆ ಪುಟ ಸಂಖ್ಯೆಃ150 ರಿಂದ 156 ರವರೆಗೆ ಅದರಲ್ಲಿ ಮೊದಲ ಮೂರು ದಾಖಲೆಗಳು ಆಮದು ರಹದಾರಿ ಪತ್ರ, ನಿರಕ್ಷೇಪಣಾ ಪತ್ರ ಮತ್ತು ಅಬಕಾರಿ ಸತ್ಯಾಪನಾ ಪತ್ರದ ನಕಲು ಪ್ರತಿಗಳು, ನಿಪಿ-27 2 ನೇ ಭಾರಿಗೆ ನಕಲು ರಹದಾರಿ ಪಡೆದ ಒಟ್ಟು ದಾಖಲೆಗಳು ಪುಟ ಸಂಖ್ಯೆಃ157, 166, 170. ನಿಪಿ-28 3 ನೇ ಭಾರಿಗೆ ನಕಲು ರಹದಾರಿ ಪಡೆದ ಒಟ್ಟು ದಾಖಲೆಗಳು ಪುಟ ಸಂಖ್ಯೆಃ169, 174, 184. ನಿಪಿ-29 4 ನೇ ಭಾರಿಗೆ ನಕಲು ರಹದಾರಿ ಪಡೆದ ಒಟ್ಟು ದಾಖಲೆಗಳು ಪುಟ ಸಂಖ್ಯೆಃ192, 194, 198.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಾಯಾವಕಾಶ ಕೋರಿದ್ದು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಓ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ ಎಂ ಎಫ್ ಸಿ ಮದ್ದೂರು